

بسم اللہ الرّحمٰن الرّحیم

# ಆರಾಧನೆ, ಕೋಪ ನಿರ್ವಹಣೆ ಮತ್ತು ಕ್ಷಮಾಶೀಲತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **10-10-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಅಲ್ಲಾಹನು ಸತ್ಯವಿಶ್ವಾಸಿಗೆ ಆರಾಧನೆ ಮಾಡುವ **ಆಬಿದ್** ಆಗಬೇಕೆಂದು ಮತ್ತು ಉತ್ತಮ ನೈತಿಕ ಗುಣಗಳನ್ನು ಹೊಂದಬೇಕೆಂದು ಬಹಳವಾಗಿ ಒತ್ತಿ ಹೇಳಿದ್ದಾನೆ. ಏಕೆಂದರೆ ಇವುಗಳಿಲ್ಲದವನು ಯಥಾರ್ಥದಲ್ಲಿ ಸತ್ಯವಿಶ್ವಾಸಿಯಾದ **ಮೂಮಿನ್** ಎಂದು ಕರೆಯಲ್ಪಡಲಾರನು. ಸತ್ಯವಿಶ್ವಾಸಿ ಅಲ್ಲಾಹನನ್ನು ಆರಾಧಿಸುವ ಜೊತೆಗೆ ನಿರರ್ಥಕ ವಿಷಯಗಳಿಂದ ಹಿಂದೆ ಸರಿಯುವವನೂ ಆಗಬೇಕು. ಒಬ್ಬನು ಸತ್ಯವಿಶ್ವಾಸಿಯಾದ **ಮೂಮಿನ್** ಆಗಿರುವಾಗ ಅವನಿಂದ ಕೆಟ್ಟಗುಣಗಳು ಪ್ರಕಟವಾಗಲು ಸಾಧ್ಯವಿಲ್ಲ. ಯಾವ ವ್ಯಕ್ತಿಯಲ್ಲಿ ಅಹಂಕಾರವಿರುತ್ತದೆಯೋ ಅವನು ಸಾಮಾನ್ಯವಾಗಿ ಕೆಟ್ಟ ಸ್ವಭಾವ ಗುಣಗಳನ್ನು ಹೊಂದಿರುತ್ತಾನೆ. ಪರಮದಯಾಳುವಾದ, **ರಹ್ಮಾನ್** ಆದ ಅಲ್ಲಾಹನ ದಾಸರು **ಯಮ್‌ಶೂನ ಅಲಲ್ ಅರ್‌ಝಿ ಹೌನಾ** "ಅವರು ಭೂಮಿಯಲ್ಲಿ ಅತ್ಯಂತ ವಿನಯದಿಂದ ನಡೆಯುತ್ತಾರೆ" ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ. ಯಾವ ವ್ಯಕ್ತಿ ವಿನಯಾನ್ವಿತನಾಗುತ್ತಾನೋ ಅವನು ಜಗಳಗಳಿಂದ ತನ್ನನ್ನು ರಕ್ಷಿಸಿಕೊಳ್ಳುತ್ತಾನಲ್ಲದೆ ಸೌಹಾರ್ದ ಭಾವನೆಯನ್ನೂ ಹೊಂದಿರುತ್ತಾನೆ. ಅವನಲ್ಲಿ ಬೇರೆ ಉನ್ನತ ಸ್ವಭಾವ ಗುಣಗಳು ಸಹ ಇರುತ್ತವೆ. ಉನ್ನತ ಸ್ವಭಾವ ಗುಣಗಳನ್ನು ಹೊಂದಿದ್ದು ಅಲ್ಲಾಹನ ಸಂಪ್ರೀತಿ ಗಳಿಸುವ ಉದ್ದೇಶವನ್ನು ಹೊಂದುವಾಗ ಅವನು ಅಲ್ಲಾಹನನ್ನು ಆರಾಧಿಸುವ ತನ್ನ ಹೊಣೆಗಾರಿಕೆಗಳನ್ನು ನೆರವೇರಿಸಲು ಪ್ರಯತ್ನಿಸುತ್ತಾನೆ. ಇದೇ ಒಬ್ಬ ವಾಸ್ತವಿಕ ಸತ್ಯವಿಶ್ವಾಸಿಯ ಲಕ್ಷಣವಾಗಿರುತ್ತದೆ. ಆದುದರಿಂದ ಓರ್ವ ಸತ್ಯವಿಶ್ವಾಸಿ **ಆಬಿದ್**(ಆರಾಧನೆ ಮಾಡುವವನು) ಮತ್ತು **ಆಜಿಝ್**(ವಿನಯಾನ್ವಿತನು) ಆಗಿರುತ್ತಾನೆ. ಕೆಲವು ಕಾರ್ಯಗಳು ಮನುಷ್ಯನಿಗೆ ಮಾಡಲು ಅಸಾಧ್ಯವಾದ ಕಾರಣ ಅವುಗಳನ್ನು ಮಾಡಬೇಕಾಗಿಲ್ಲ ಎಂದು ಕೆಲವರು ಹೇಳುವುದಿದೆ. ಆದರೆ ಇದು ಕನಿಷ್ಟಪಕ್ಷ ಇಸ್ಲಾಮ್ ಧರ್ಮಕ್ಕೆ ಸಂಬಂಧಪಟ್ಟಂತೆ ತಪ್ಪಾಗಿರುತ್ತದೆ. ನಮಾಝ್ ಬಗ್ಗೆ ಅದು ಸತ್ಯವಿಶ್ವಾಸಿಗೆ **ಫರ್ಝ್**(ಕಡ್ಡಾಯ) ಆಗಿದೆ ಎಂದು ಅಲ್ಲಾಹನು ಆಜ್ಞಾಪಿಸಿರುವನು. ಅದರ ಜೊತೆಗೆ ಅನೇಕ ಸೌಲಭ್ಯಗಳನ್ನೂ ನೀಡಿರುವನು. ಯಾರಿಗಾದರೂ ನಿಂತು ನಮಾಝ್ ಮಾಡಲು ಸಾಧ್ಯವಿಲ್ಲವಾದರೆ ಅವನೊಂದಿಗೆ "ನೀನು ಕುಳಿತುಕೊಂಡು ನಮಾಝ್ ಮಾಡು" ಎಂದು ಹೇಳಲಾಗಿದೆ. ಕುಳಿತು ನಮಾಝ್ ಮಾಡಲು ಸಾಧ್ಯವಿಲ್ಲದವನಿಗೆ "ನೀನು ಮಲಗಿಕೊಂಡು ನಮಾಝ್ ಮಾಡು" ಎಂದು ಸಹ ಹೇಳಲಾಗಿದೆ. ರೋಗಿಯಾದವನಿಗೆ ಇದು ಅನ್ವಯಿಸುತ್ತದೆ. ಪ್ರಯಾಣಿಕನಾಗಿರುವಾಗ ನಮಾಝನ್ನು ಸಂಕ್ಷಿಪ್ತಗೊಳಿಸಬಹುದು ಮತ್ತು ಎರಡು ನಮಾಝ್‌ಗಳನ್ನು ಒಟ್ಟಿಗೆ ಅನುಷ್ಠಿಸಬಹುದು. ಆದುದರಿಂದ ನಮಾಝ್ ಮಾಡುವುದು ಅಸಾಧ್ಯವೆಂದು ಒಬ್ಬ ವ್ಯಕ್ತಿ ತನ್ನ ಯಾವುದಾದರೂ ಅಡಚಣೆಯ ಕಾರಣದಿಂದ ಹೇಳಲು ಸಾಧ್ಯವಿಲ್ಲ. ಬಟ್ಟೆ ಸ್ವಚ್ಛವಾಗಿರದಿದ್ದರೆ ಅದನ್ನು ಬದಲಾಯಿಸಲು ಸಾಧ್ಯವಿಲ್ಲದಾಗ ಅದೇ ಬಟ್ಟೆಯಲ್ಲಿ ನಮಾಝ್ ಮಾಡಬಹುದು. ಅಂತೂ ನಮಾಝ್ ಮಾಡುವುದು ಆವಶ್ಯಕವಾಗಿದೆ. ಅದೇರೀತಿ, ನೀರು ದೊರಕದಿದ್ದರೆ **ತಯ್ಯಮ್ಮುಮ್** ಮಾಡಿ ನಮಾಝ್ ಮಾಡಬಹುದಾಗಿದೆ. ಒಟ್ಟಿನಲ್ಲಿ, ನಮಾಝ್ ಮಾಡಲು ಸಾಧ್ಯವಾಗುವುದಿಲ್ಲ ಎಂಬ ನೆವನವನ್ನು ಯಾವುದೇ ಬುದ್ಧಿಶಾಲಿ ಅಂಗೀಕರಿಸಲಾರನು. ಬುದ್ಧಿ ಸ್ಥಿಮಿತ ಮತ್ತು ಪ್ರಜ್ಞೆಯಿಂದ ಇರುವ ತನಕ ನಮಾಝ್ ಅನುಷ್ಠಿಸುವುದು ಆವಶ್ಯಕವಾಗಿದೆ.

ಐಯರ್‌ಲೇಂಡಿನಲ್ಲಿ ಮಸ್‌ಜಿದ್ ಉದ್ಘಾಟನೆ ಮಾಡುವಾಗ ನಾನು ಖುತುಬದಲ್ಲಿ ಆರಾಧನೆಗಳ ಬಗ್ಗೆ ನಿಷ್ಠಾವಂತರಾಗಲು ಹೇಳಿದ್ದೆ. ಅಮೇರಿಕದಿಂದ ನಮ್ಮ ಒಬ್ಬ ಮುಬಲ್ಲಿಗ್ ನನಗೆ ತಿಳಿಸಿದರು ಮತ್ತು ಬೇರೆ ಕಡೆಗಳಿಂದಲೂ ನನಗೆ ಪತ್ರಗಳು ಬಂದವು– ಈಗ ಮಸ್‌ಜಿದ್‌ಗಳಲ್ಲಿ ಜನರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿದ್ದಾರೆಂದು. ಖುದ್ದಾಮುಲ್ ಅಹ್ಮದಿಯಾ ಮತ್ತು ಲಜ್‌ನದವರು ಯುವ ಜನರಲ್ಲಿ ನಮಾಝ್ ಬಗ್ಗೆ ನಿಷ್ಠೆ ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಈ ವಯಸ್ಸಿನಲ್ಲಿ ಆರೋಗ್ಯ ಚೆನ್ನಾಗಿರುತ್ತದೆ. ಮತ್ತು ಆರಾಧನೆಯ ಕರ್ತವ್ಯಗಳನ್ನು ನೆರವೇರಿಸಲು ಸುಲಭವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ತಾರುಣ್ಯ ಕಾಲದಲ್ಲಿಯೇ ಆರಾಧನೆಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಿಸಲು ಸಾಧ್ಯವಾಗುತ್ತದೆ ಎಂದು ಹೇಳಿರುವರು. ವೃದ್ಧಾಪ್ಯದಲ್ಲಿ ವಿವಿಧ ಕಾರಣಗಳಿಂದ ಆರಾಧನೆಗಳನ್ನು ಅನುಷ್ಠಿಸಬೇಕಾದ ರೀತಿಯಲ್ಲಿ ಅನುಷ್ಠಿಸಲು ಕಷ್ಟವಾಗಬಹುದು. ಆದುದರಿಂದ ಈ ವಿಷಯಕ್ಕೆ ಸಂಬಂಧಿಸಿ ನಾವು ಬಹಳ ಪ್ರಯತ್ನಗಳನ್ನು ಮಾಡಬೇಕು. ಹೀಗೆ ಮಾಡದಿದ್ದರೆ ನಮ್ಮ ವಿಶ್ವಾಸ ಪರಿಪೂರ್ಣವಾಗಲಾರದು.

ಇನ್ನು ನಾನು ಒಳ್ಳೆಯ ಸ್ವಭಾವ ಗುಣಗಳ ಬಗ್ಗೆ ಪ್ರಸ್ತಾಪಿಸುವೆನು. ಉನ್ನತ ಸ್ವಭಾವ ಗುಣಗಳನ್ನು ಹೊಂದಿರುವವರ ಒಂದು ಪ್ರಧಾನ ಲಕ್ಷಣವೆಂದರೆ ಸತ್ಯ

ಹೇಳುವುದಾಗಿದೆ. ಅವರು ಸತ್ಯದಲ್ಲಿ ಸ್ಥಿರವಾಗಿರುತ್ತಾರೆ. ಸತ್ಯವಿಶ್ವಾಸಿ ಯಾವಾಗಲೂ ಸತ್ಯವನ್ನು ಅವಲಂಬಿಸುವವನೂ ಸುಳ್ಳಿನ ಸಮೀಪ ಹೋಗದವನೂ ಆಗಿರುತ್ತಾನೆ. ಸುಳ್ಳು ಹೇಳುವ ಬಗ್ಗೆ ಒಂದು ರೀತಿಯ ಅಸಹ್ಯ ಭಾವನೆ ಇರುವವನಿಗೆ ಮಾತ್ರ ಹೀಗೆ ಆಗಲು ಸಾಧ್ಯವಾಗುತ್ತದೆ. ಒಬ್ಬನು ಸುಳ್ಳು ಹೇಳಿದ ನಂತರ ಅದರ ಬಗ್ಗೆ ಪಶ್ಚಾತ್ತಾಪ ಪಡದಿದ್ದರೆ, ಅದರಿಂದ ಯಾರಿಗಾದರೂ ಹಾನಿ ಸಂಭವಿಸಿದ್ದರೆ ಅದಕ್ಕೆ ಪರಿಹಾರವನ್ನು ಮಾಡಲು ಸಹ ಪ್ರಯತ್ನ ಮಾಡದಿದ್ದರೆ ಅವನು ವಿಶ್ವಾಸಿ ಆಗಲಾರ. ಅವನು ಉತ್ತಮ ಸ್ವಭಾವ ಗುಣ ಹೊಂದಿದವನಾಗಲಾರನು. ಅಂತಹ ವ್ಯಕ್ತಿ ತಾನು ನೇರಮಾರ್ಗದಲ್ಲಿಲ್ಲ ಎಂದು ತಿಳಿದುಕೊಳ್ಳಬೇಕಾಗಿದೆ.

ಒಳ್ಳೆಯ ಸ್ವಭಾವ ಗುಣಗಳ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ: **ವ ಖೂಲೂಲಿಲ್ಲಾಹಿ ಹುಸ್‌ನನ್**. "ಜನರೊಂದಿಗೆ ಮೃದುವಾಗಿಯೂ ಉತ್ತಮವಾಗಿಯೂ ವರ್ತಿಸಿರಿ" ಅವರೊಂದಿಗೆ ಒಳ್ಳೆಯ ರೀತಿಯಲ್ಲಿ ಮಾತನಾಡಿರಿ. ಕೆಲವು ಜನರಲ್ಲಿ ಒರಟುತನದ ಸ್ವಭಾವ ಇರುತ್ತದೆ. ಅಂತಹ ಜನರು ಒರಟು ಸ್ವಭಾವ ಕೈಬಿಟ್ಟು ಮೃದು ಸ್ವಭಾವಿಗಳಾಗಲು ಪರಿಶ್ರಮಿಸಬೇಕಾಗಿದೆ. ಅನ್ಯರಿಗೆ ನೋವುಂಟಾಗುವ ರೀತಿಯಲ್ಲಿ ವರ್ತಿಸಬಾರದು. ಚಿಕ್ಕ ಪುಟ್ಟ ವಿಷಯಗಳ ಕಾರಣದಿಂದ ಕೋಪವಿಷ್ಟರಾಗಬಾರದು.

ಕೆಲವು ಜನರು ಶೀಘ್ರ ಕೋಪಿಗಳಾಗಿರುತ್ತಾರೆ. ಇಂತಹ ಜನರು ಕೆಲವೊಮ್ಮೆ ಕಠಿಣವಾಗಿ ಮಾತನಾಡಿದರೆ ಅನಂತರ ಅವರು ತಮ್ಮ ವರ್ತನೆ ಬಗ್ಗೆ ಪಶ್ಚಾತಾಪ ಪಟ್ಟು ಅವರ ವರ್ತನೆಯಿಂದ ಯಾರಿಗಾದರೂ ನೋವುಂಟಾಗಿದ್ದರೆ ಅದರ ನಿವಾರಣೆಗೆ ಪ್ರಯತ್ನಿಸಬೇಕಾಗಿದೆ. ಮತ್ತು ಇಸ್ತಿಗ್‌ಫಾರ್ ಮಾಡಬೇಕಾಗಿದೆ. ಅಲ್ಲಾಹನು ಹೇಳಿದ್ದಾನೆ– 'ನಾನು **ತೌಬ**ದ ಬಾಗಿಲು ಎಂದರೆ ಪಶ್ಚಾತ್ತಾಪಗೊಂಡು ಕ್ಷಮೆಯನ್ನು ಯಾಚಿಸುವ ಬಾಗಿಲು ತೆರೆದಿಟ್ಟಿದ್ದೇನೆ' ಎಂದು. ಅಲ್ಲಾಹನು ಅಂಥವರ **ತೌಬ** ಪ್ರಾರ್ಥನೆಯನ್ನು ಅಂಗೀಕರಿಸುತ್ತಾನೆ. ಆದರೆ ಯಾರು ಪಶ್ಚಾತಾಪಗೊಂಡು ಪ್ರಾರ್ಥಿಸುವುದಿಲ್ಲವೋ ಅವನು ಅಲ್ಲಾಹನ ಸನ್ನಿಧಿಯಲ್ಲಿ ಯಾವುದೇ ನೆವನವನ್ನು ಸೂಚಿಸಲಾರನು. ಆದುದರಿಂದ ನಾವು ನಮ್ಮನ್ನು ಪರಿಶೀಲಿಸಬೇಕಾಗಿದೆ.

ಪತಿ ಪತ್ನಿಯರ ಜಗಳಗಳ ಬಗ್ಗೆ ಅನೇಕ ದೂರುಗಳು ಬರುತ್ತಾ ಇರುತ್ತವೆ. ಆರ್ಥಿಕ ವ್ಯವಹಾರಗಳ ಬಗ್ಗೆ ಸಹ ದೂರುಗಳು ಬರುತ್ತವೆ. ಜನರು ಎಷ್ಟು ಕೋಪಭರಿತರಾಗಿರುತ್ತಾರೆಂದರೆ ನಾವು ಏನು ಹೇಳುತ್ತಿದ್ದೇವೆ ನಾವು ಏನು ಮಾಡುತ್ತಿದ್ದೇವೆ ಎಂಬುದರ ಬಗ್ಗೆ ನೋಡುವುದೇ ಇಲ್ಲ. ಮಹಿಳೆಯರಿಗೆ ಮಾನಸಿಕ ಕಷ್ಟ ನೀಡುತ್ತಾರಲ್ಲದೆ ಅವರ ಮೇಲೆ ಕೈ ಎತ್ತುತ್ತಾರೆ ಇದೇ ರೀತಿ ಬೇರೆ ವ್ಯವಹಾರಗಳಲ್ಲೂ ತಪ್ಪಾಗಿ ವರ್ತಿಸುತ್ತಾರೆ. ಅವರು ತಮ್ಮ ತಪ್ಪನ್ನು ಮನವರಿಕೆ ಮಾಡಲು ಪ್ರಯತ್ನ ಸಹ ಮಾಡುವುದಿಲ್ಲ.

ಜಮಾಅತಿನ ಇಸ್ಲಾಹೀ ಕಮಿಟಿಯಾಗಲೀ **ಖಝಾ** ವ್ಯವಸ್ಥೆಯಾಗಲಿ ಎಷ್ಟು ಪ್ರಯತ್ನಿಸಿದರೂ ಈ ಜನರು ತಮ್ಮ ನಿಲುವನ್ನು ಹಟದಿಂದ ಮುಂದುವರಿಸುತ್ತಾರೆ. ಆದರೆ ಯಾವುದಾದರೂ ಪಕ್ಷದ ವಿರುದ್ಧ ಶಿಕ್ಷೆಯ ಕ್ರಮಕೈಗೊಂಡರೆ ಆಗ ಅವರು ಕ್ಷಮೆಯಾಚಿಸುತ್ತಾರೆ ಮತ್ತು ಅವರು ಮಾಡಿದ ಅನ್ಯಾಯಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಇಂತಹ ಜನರು ತಮಗೆ ಶಿಕ್ಷೆ ದೊರೆತ ನಂತರವಾದರೂ ಕ್ಷಮೆಯನ್ನು ಯಾಚಿಸಿ ತಮ್ಮ ದುರ್ಗತಿಯಿಂದ ರಕ್ಷೆಯನ್ನು ಪಡೆಯಲು ಪ್ರಯತ್ನಿಸುವುದು ಒಳ್ಳೆಯದೇ ಆಗಿದೆ. ಆದರೆ ಅವರಿಗೆ ಶಿಕ್ಷೆ ಲಭಿಸಿತ್ತು ಎಂಬ ಕಳಂಕ ಅವರ ಮೇಲಿರುತ್ತದೆ. ಅವರು ತಮ್ಮ ಅಹಂಭಾವವನ್ನು ಮೊದಲೇ ತ್ಯಜಿಸಿರುತ್ತಿದ್ದರೆ ಅವರಿಗೆ ರಾಜಿ ಮಾಡಬಹುದಾಗಿತ್ತು. ಇಂತಹ ಜನರು ತಮ್ಮ ವಿಶ್ವಾಸವನ್ನು(ಈಮಾನನ್ನು) ಸಂರಕ್ಷಿಸಲು ಚಿಂತಿಸಬೇಕು. ಲೋಕದಲ್ಲಿ ಸಿಗುವ ಲಾಭಗಳು ಮತ್ತು ಸೌಲಭ್ಯಗಳು ಕೆಲವು ದಿನಗಳಿಗಾಗಿರುತ್ತವೆ. ನಾವು ನಮ್ಮ ಅಂತಿಮ ಗತಿಯ ಬಗ್ಗೆ ಯೋಚಿಸಬೇಕು. ನಾವು ನಮ್ಮ ಸ್ವಭಾವ ಗುಣಗಳ ಮಟ್ಟವನ್ನು ಉನ್ನತಗೊಳಿಸಬೇಕೆಂದೂ ಚಿಕ್ಕ ಚಿಕ್ಕ ವಿಷಯಗಳಲ್ಲಿ ನಮ್ಮ ಅಹಂಭಾವದ ಬಲೆಯೊಳಗೆ ಸಿಲುಕಬಾರದೆಂದೂ ನಾನು ಆಗಾಗ ಜಮಾಅತ್‌ನೊಂದಿಗೆ ಹೇಳುತ್ತಿರುತ್ತೇನೆ. ನಮ್ಮ ಜಮಾಅತಿನ ಪ್ರತಿಯೊಬ್ಬನೂ ಉತ್ತಮ ಸ್ವಭಾವ ಗುಣ ಮತ್ತು ಮಾನವೀಯತೆಯನ್ನು ಉನ್ನತ ಮಟ್ಟದಲ್ಲಿ ಪ್ರದರ್ಶಿಸುವವನಾಗಬೇಕು. ನಾವು ನಮ್ಮ ಭಾವೋದ್ವೇಗಗಳನ್ನು ನಿಯಂತ್ರಿಸಬೇಕು ಮತ್ತು ಅಲ್ಲಾಹನ ಇಚ್ಛೆ ಪ್ರಕಾರ ಅವುಗಳನ್ನು ವಿನಿಯೋಗಿಸಬೇಕು.

ಪತಿ ಪತ್ನಿಯರ ಬಗ್ಗೆ ನಾನು ಪ್ರಸ್ತಾಪಿಸಿದ್ದೆ. ನಿಕಾಹ್ ಖುತುಬದಲ್ಲಿ ಪಠಿಸಲಾಗುವ ಪವಿತ್ರ ಖುರ್‌ಆನ್ ವಚನಗಳನ್ನು ನೋಡಿರಿ. ಅಲ್ಲಾಹನು ಅದರಲ್ಲಿ **ತಖ್ವ**ವನ್ನು ಮುಂದಿರಿಸಿ ಅನೇಕ ಆಜ್ಞೆಗಳನ್ನು ನೀಡಿರುತ್ತಾನೆ. ಅವುಗಳನ್ನು ಈಡೇರಿಸುವುದು ಪತಿಗೂ ಪತ್ನಿಗೂ ಆವಶ್ಯಕವಾಗಿದೆ. ಆದರೆ ಬಹುತೇಕ ಜನರು ಈ ಆಜ್ಞೆಗಳನ್ನು ಗಮನಿಸುವುದಿಲ್ಲ. ವಿವಾಹ ಆಗಿದೆ. ಇಷ್ಟೇ ಸಾಕು ಎಂದು ಯೋಚಿಸುತ್ತಾರೆ. ಅಲ್ಲಾಹನು ಹೇಳುವುದು– ಸಿಟ್ಟನ್ನು ಅದುಮಿಡಿರಿ. ಉತ್ತಮ ಸ್ವಭಾವದಿಂದ ವರ್ತಿಸಿರಿ ಎಂದು. ತಪ್ಪು ಮಾಡಿ ಹಟದೋರಬೇಡಿರಿ. ಜನರ ಹಕ್ಕುಗಳನ್ನು ಕೊಡಲು ಪ್ರಯತ್ನಿಸಿರಿ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: "ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸದವನು ಅಲ್ಲಾಹನ ಹಕ್ಕುಗಳನ್ನೂ ಸಹ ಈಡೇರಿಸಲಾರನು. ಅವರ ನಮಾಝ್‌ಗಳು ಮತ್ತು ಇತರ ಆರಾಧನೆಗಳು ತೋರಿಕೆಗೆ ಆಗಿರುತ್ತವೆ. ಏಕೆಂದರೆ ಅವರ ಆರಾಧನೆಗಳು ಒಬ್ಬ ಸತ್ಯವಿಶ್ವಾಸಿಯಲ್ಲಿ ಉಂಟು ಮಾಡುವಂತಹ ಬದಲಾವಣೆಗಳನ್ನು ಅವರಲ್ಲಿ ಉಂಟುಮಾಡಿಲ್ಲ. ಅಲ್ಲಾಹನ ಸಾಮೀಪ್ಯ ಪಡೆಯುವಂತೆ ಮಾಡುವ ವಿನಯವನ್ನು ಅವರಲ್ಲಿ ಅದು ಉಂಟುಮಾಡಲಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳಿದ್ದಾರೆ: "ಸಿಟ್ಟಿನಿಂದ ಭರಿತರಾದವರ ಬುದ್ಧಿ ಶೂನ್ಯವಾಗಿರುತ್ತದೆ. ಅವರು ಕೆಲವು ಸಾರಿ ಹುಚ್ಚರಂತಾಗುತ್ತಾರೆ. ಸಹನೆಯಿಂದ ಮಾತ್ರವೇ ಬುದ್ಧಿಶಕ್ತಿ ವರ್ಧಿಸುತ್ತದೆ.

ಬುದ್ಧಿಶಕ್ತಿ ಮತ್ತು ಕೋಪ ಇವುಗಳ ಮಧ್ಯೆ ಬಹಳ ಹಗೆತನವಿದೆ. ಕೋಪ ಬಂದಾಗ ಬುದ್ಧಿ ನಷ್ಟವಾಗುತ್ತದೆ. ಯಾರು ಸಹನೆಯಿಂದ ವರ್ತಿಸುತ್ತಾನೋ ಮತ್ತು ಯಾರು ಸಹಿಸುವ ಮಾದರಿಯನ್ನು ತೋರಿಸುತ್ತಾನೋ ಅಂತಹ ವ್ಯಕ್ತಿಗೆ ಒಂದು ಪ್ರಕಾಶ ನೀಡಲ್ಪಡುತ್ತದೆ. ಅದರ ಮೂಲಕ ಅವನ ಬುದ್ಧಿ ಮತ್ತು ಚಿಂತನೆಗಳ ಶಕ್ತಿಗಳಲ್ಲಿ ಒಂದು ಹೊಸ ಬೆಳಕು ಉಂಟಾಗುತ್ತದೆ. ಅನಂತರ ಪ್ರಕಾಶದಿಂದ ಪ್ರಕಾಶ ಹುಟ್ಟುತ್ತದೆ. ಆದರೆ ಸಿಟ್ಟು ತಲೆದೋರಿದಾಗ ಹೃದಯ ಮತ್ತು ಮಸ್ತಿಷ್ಕಗಳಲ್ಲಿ ಕತ್ತಲೆ ಕವಿಯುತ್ತದೆ. ಈ ಅಂಧಕಾರದಿಂದ ಅಂಧಕಾರವೇ ಹುಟ್ಟುತ್ತದೆ."

ಚಿಕ್ಕ ಪುಟ್ಟ ವಿಷಯಗಳಿಗಾಗಿ ಸಿಟ್ಟಾಗುವ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಅವರ ಹೃದಯ ಜಾಣ್ಮೆರಹಿತವಾಗುತ್ತದೆ. ಸಿಟ್ಟು ಮತ್ತು ಜಾಣ್ಮೆ ಒಟ್ಟಿಗೆ ಇರಲಾರದು. ಸಿಟ್ಟಿನಿಂದ ತುಂಬಿದವನ ಬುದ್ಧಿಶಕ್ತಿ ನಿದ್ರಿಸುತ್ತದೆ. ಅವನ ಪ್ರಜ್ಞೆ ಮೊಂಡಾಗುತ್ತದೆ. ಅಂತಹ ವ್ಯಕ್ತಿ ಯಾವುದೇ ಕ್ಷೇತ್ರದಲ್ಲಿ ಜಯಶಾಲಿಯಾಗಲಾರ. ಸಿಟ್ಟು ಎಂಬುದು ಅರ್ಧ ಹುಚ್ಚು ಆಗಿದೆ. ಸಿಟ್ಟು ಮಿತಿಮೀರಿದಾಗ ಪೂರ್ಣ ಹುಚ್ಚು ತಲೆದೋರುತ್ತದೆ."

ಸತ್ಯ ವಿಶ್ವಾಸಿಯನ್ನು ವರ್ಣಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: "ಮನುಷ್ಯನು ತನ್ನ ಶಕ್ತಿಗಳನ್ನು ಧರ್ಮಬದ್ಧವಾಗಿ ಮತ್ತು ಸಂದರ್ಭೋಚಿತವಾಗಿ ಬಳಸಬೇಕು. ಮನುಷ್ಯನ ಒಂದು ಸಹಜ ಗುಣ ಕೋಪವಾಗಿದೆ. ಅದು ಮಿತಿ ಮೀರಿದರೆ ಹುಚ್ಚು ಪ್ರಾರಂಭವಾಗುತ್ತದೆ. ಹುಚ್ಚು ಮತ್ತು ಕೋಪದಲ್ಲಿ ಬಹಳ ಕಡಿಮೆ ವ್ಯತ್ಯಾಸವಿದೆ. ಯಾರು ಹೆಚ್ಚು ಕೋಪಭರಿತನಾಗಿರುತ್ತಾನೋ ಅವನಿಂದ ಬುದ್ಧಿ ಎಂಬ ಒರತೆ ಕಿತ್ತುಕೊಳ್ಳಲಾಗುತ್ತಿದೆ. ಶತ್ರುವಿನ ವಿರುದ್ಧ ಸಹ ಸಿಟ್ಟಿನಿಂದ ಮಾತನಾಡಬಾರದು."

"ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ **ಕಾಝಿಮೀನಲ್ ಗೈಝು ವಲ್ ಆಫೀನ ಅನಿನ್ನಾಸ್** 'ಸತ್ಯವಿಶ್ವಾಸಿಗಳು ಸಿಟ್ಟನ್ನು ತಿಂದು ಬಿಡುತ್ತಾರೆ ಮತ್ತು ಜನರೊಂದಿಗೆ ಕ್ಷಮಿಸುವ ಭಾವನೆಯಿಂದ ವರ್ತಿಸುತ್ತಾರೆ' ಎಂದು ಹೇಳಲಾಗಿದೆ. ಆದುದರಿಂದ ನಾವು ಸಹ ಕ್ಷಮಿಸುವ ಮತ್ತು ತಪ್ಪನ್ನು ಕಡೆಗಣಿಸುವ ಗುಣವನ್ನು ಹೊಂದಲು ಪ್ರಯತ್ನಿಸಬೇಕು. ಅಲ್ಲಾಹನಿಂದ ಪ್ರಕಾಶ ಗಳಿಸಲು ನಾವು ಸಹನೆಯನ್ನು ಮತ್ತು ಕ್ಷಮಿಸುವ ಗುಣವನ್ನು ನಮ್ಮಲ್ಲಿ ಉಂಟುಮಾಡಲು ಪ್ರಯತ್ನಿಸಬೇಕು."

ನಮ್ಮ ಬಾಯಿಗಳಿಂದ ಜ್ಞಾನಭರಿತ ಮಾತುಗಳು ಹೊರಬರಬೇಕಾದರೆ, ಜನರು ನಮ್ಮ ಕಡೆಗೆ ಲಕ್ಷ್ಯ ನೀಡುವವರಾಗಬೇಕಾದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನೋದ್ದೇಶವನ್ನು ಈಡೇರಿಸುವವರಾಗಬೇಕಾದರೆ ನಾವು ನಮ್ಮ ಮನೆಗಳಲ್ಲಿ ಮತ್ತು ನಮ್ಮ ನಿತ್ಯ ವ್ಯವಹಾರಗಳಲ್ಲಿ ಸಿಟ್ಟಿನಿಂದ ವರ್ತಿಸುವುದರಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಎಂದೂ ನಾಶವಾಗದಂತೆ ರಕ್ಷಿಸಿಕೊಳ್ಳಬೇಕಾದರೆ ನಾವು ಕೋಪದಿಂದಲೂ ಅನ್ಯರ ಬಗ್ಗೆ ಕೆಟ್ಟ ಸಂಶಯ ಹೊಂದುವುದರಿಂದಲೂ ನಮ್ಮನ್ನು ರಕ್ಷಿಸಿಕೊಳ್ಳಬೇಕು.

ನಾವು ವಾಸ್ತವಿಕವಾಗಿಯೂ ಸತ್ಯವಿಶ್ವಾಸಿಗಳಾಗಬೇಕಾದರೆ ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಯೋಗ್ಯ ರೀತಿಗಳಲ್ಲೂ ಯೋಗ್ಯ ಸಂದರ್ಭಗಳಲ್ಲೂ ಬಳಸಬೇಕು. ಇಸ್ಲಾಮ್ ಧರ್ಮದ ಸೌಂದರ್ಯವೇನೆಂದರೆ ಅದು ಉನ್ನತ ಸ್ವಭಾವ ಗುಣಗಳನ್ನು ಉಪದೇಶಿಸುತ್ತದೆ. ಅನಾವಶ್ಯಕ ಕೋಪವನ್ನು ಅದುಮಿ ಹಾಕಲು ಮತ್ತು ಕ್ಷಮೆ ನೀಡಲು ಅದು ಆದೇಶಿಸುತ್ತದೆ. ಇಂತಹ ಗುಣಗಳನ್ನು ಹೊಂದದೆ ವಾಸ್ತವಿಕವಾಗಿ ಸತ್ಯವಿಶ್ವಾಸಿಯಾಗಲು ಸಾಧ್ಯವಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವಿಧ ಗ್ರಂಥಗಳಲ್ಲಿ ಮತ್ತು ಲೇಖನಗಳಲ್ಲಿ ನಮ್ಮ ಭಾವೋದ್ವೇಗಗಳನ್ನು ಹತೋಟಿಯಲ್ಲಿರಿಸಲು ಪದೇ ಪದೇ ಉಪದೇಶಿಸಿದ್ದಾರೆ. ಆದರೆ ನಮ್ಮಲ್ಲಿ ಬಲಹೀನತೆ ಇದೆ. ನಾವು ಈ ಉಪದೇಶಗಳನ್ನು ಪಾಲಿಸಬೇಕಾದ ರೀತಿಯಲ್ಲಿ ಪಾಲಿಸುತ್ತಾ ಇಲ್ಲ. ಸಾಮಾನ್ಯ ಅಹ್ಮದಿಯರು ಮತ್ತು ಹುದ್ದೇದಾರರು ಸಹ ಇಂತಹವರಲ್ಲಿ ಸೇರಿದ್ದಾರೆ. ಅನ್ಯರಿಗೆ ಇವುಗಳ ಬಗ್ಗೆ ಉಪದೇಶಿಸುವವರು ಅವುಗಳನ್ನು ಸ್ವತಃ ಮರೆತು ಬಿಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: "ನೀವು ಸತ್ಯವಂತರಾಗಿದ್ದರೂ ಸುಳ್ಳುಗಾರರ ಹಾಗೆ ತಗ್ಗಿ ನಡೆಯಿರಿ"

ನಾವು ನಮ್ಮನ್ನು ಪರಿಶೀಲಿಸಬೇಕು ಈ ರೀತಿ ಯೋಚಿಸುವವರು ನಮ್ಮ ಪೈಕಿ ಎಷ್ಟು ಜನರಿದ್ದಾರೆ. ಸಂದರ್ಭವಶಾತ್ ಉಂಟಾದ ಸಿಟ್ಟಿನಿಂದ ಒಂದು ಅನ್ಯಾಯದ ಕೆಲಸ ಮಾಡಿಬಿಟ್ಟಿದ್ದರೆ, ಸಿಟ್ಟು ಶಮನಗೊಂಡ ನಂತರ ಅದಕ್ಕೆ ಪರಿಹಾರ ಮಾಡಬೇಕು. ಇಂತಹ ವ್ಯಕ್ತಿ ತನ್ನ ಕೆಲಸದ ಬಗ್ಗೆ ಪಶ್ಚಾತ್ತಾಪ ಪಡದಿದ್ದರೆ ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಪ್ರಕಾರ ವಾಸ್ತವಿಕ ಸತ್ಯವಿಶ್ವಾಸಿ ಆಗಲಾರ. ಅವನ ವಿಶ್ವಾಸ ಕೇವಲ ತೋರಿಕೆಯದು. ಅವನ ಸ್ಥಿತಿ ನೀರಿನ ಗುಳ್ಳೆಯ ಹಾಗಿದೆ. ಅದರೊಳಗೆ ಕೇವಲ ಗಾಳಿ ಮಾತ್ರವಿರುತ್ತದೆ. ನಾವು ನಮ್ಮನ್ನು ಪರಿಶೀಲಿಸಬೇಕು, ನಮ್ಮ ಮೇಲೆ ದೌರ್ಜನ್ಯ ನಡೆದಿದ್ದರೂ ನಾವು ಅದನ್ನು ಸಹಿಸಿದ್ದೇವೋ ಅಥವಾ ಕೋಪದಿಂದ ಉತ್ತರ ನೀಡಿದೆವೋ ಎಂದು ನೋಡಬೇಕು. ಅನ್ಯರು ಅತಿರೇಕದಿಂದ ವರ್ತಿಸಿದರೂ ನ್ಯಾಯಪೂರ್ಣವಾಗಿ

ತೀರ್ಪು ನೀಡಿದ ಹುದ್ದೇದಾರರು ನಮ್ಮಲ್ಲಿ ಎಷ್ಟು ಜನ ಇದ್ದಾರೆ?

ಮಕ್ಕಳಿಗೆ ತಂದೆ ತಾಯಂದಿರು ಶಿಕ್ಷೆ ನೀಡುವ ಹಾಗೆ ಖಾಝಿ ದೌರ್ಜನ್ಯ ಮಾಡುವವರಿಗೆ ಶಿಕ್ಷೆ ನೀಡುತ್ತಾರೆ. ಶರೀಅತ್ ನಿಯಮವನ್ನು ಉಲ್ಲಂಘಿಸಿದ ಕಾರಣ ಅಥವಾ ಅನ್ಯರ ಹಕ್ಕುಗಳನ್ನು ಅಪಹರಿಸಿದ ಕಾರಣ ಶಿಕ್ಷೆ ದೊರಕುತ್ತದೆ. ಕೆಲವರು ದೌರ್ಜನ್ಯ ಮಾಡುತ್ತಾರೆ. ಶರೀಅತ್ ನಿಯಮಗಳಿಗೆ ನಿಷ್ಠರಾಗಿರುವುದಿಲ್ಲ. ಅವರು ಅನ್ಯರ ಹಕ್ಕುಗಳನ್ನು ಅಪಹರಿಸುತ್ತಾರೆ. ಇಂತಹ ಜನರಿಗೆ ಜಮಾಅತಿನಿಂದ ಶಿಕ್ಷೆ ದೊರಕುವಾಗ ಅವರು ನನಗೆ ಪತ್ರ ಬರೆಯುತ್ತಾರೆ. ನೀವು ಕ್ಷಮೆ ನೀಡುವ ಬಗ್ಗೆ ಖುತುಬ ನೀಡಿದ್ದೀರಿ, ನಮ್ಮನ್ನು ಸಹ ಕ್ಷಮಿಸಿರಿ ಎಂದು. ನಾನು ಇದರ ಮೊದಲು ಅನೇಕ ಸಲ ಹೇಳಿದ ಹಾಗೆ ನನಗೆ ಯಾರ ವಿರುದ್ಧವೂ ವೈಯಕ್ತಿಕ ಹಗೆತನವಿಲ್ಲ. ಕೆಲವರು ನನ್ನನ್ನು ಬೈದು ಪತ್ರ ಬರೆಯುತ್ತಾರೆ. ಅವರ ವಿರುದ್ಧ ಸಹ ನನಗೆ ಕೋಪವಿಲ್ಲ. ಸಾಮಾನ್ಯವಾಗಿ ಇಂತಹ ಜನರು ತಮ್ಮ ಹೆಸರು ಬರೆಯುವುದಿಲ್ಲ ಅಥವಾ ಸುಳ್ಳು ಹೆಸರು ಬರೆಯುತ್ತಾರೆ. ಇಂತಹ ಜನರು ತಮ್ಮ ಹೆಸರು ಸರಿಯಾಗಿ ಬರೆದರೂ ಕೂಡಾ ನಾನು ಅವರ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಾರೆ. ಅವರು ಬೈದು ಕೊಳ್ಳಲಿ, ನನಗೆ ಅವರ ಬಗ್ಗೆ ದಯೆ ಉಂಟಾಗುತ್ತದೆ ಹಾಗೂ ನಾನು ಹೆಚ್ಚು **ಇಸ್ತಿಗ್‌ಫಾರ್** ಮಾಡುತ್ತೇನೆ. ಹಾಗೆ, ಅದು ನನಗೆ ಒಳಿತನ್ನೇ ಉಂಟುಮಾಡುತ್ತದೆ. ಶರೀಅತ್ ನಿಯಮಗಳನ್ನು ಉಲ್ಲಂಘಿಸುವವರಿಗೆ ಮತ್ತು ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವವರಿಗೆ ಶಿಕ್ಷೆ ನೀಡಲಾಗುತ್ತಿದೆ. ಈ ಶಿಕ್ಷೆ ಸಂತೋಷದಿಂದ ನೀಡುವುದಲ್ಲ. ಬಹಳ ದುಃಖದಿಂದ ನೀಡಲಾಗುತ್ತಿದೆ. ಶಿಕ್ಷೆಗೆ ಗುರಿಯಾದವರು ಕ್ಷಮೆ ಯಾಚಿಸಿದಾಗ ಅವರಿಗೆ ಕ್ಷಮೆ ನೀಡಲು ನಝೂರತ್ ಉಮೂರೆ ಆಮ್ಮ ಅಥವಾ ಅಮೀರರು ಶಿಫಾರಸು ಮಾಡಿ ಬರೆದ ಪತ್ರ ನನಗೆ ಲಭಿಸುವ ದಿನ ನನಗೆ ಸಂತೋಷದ ದಿನವಾಗಿರುತ್ತದೆ. ಆದುದರಿಂದ, ಎಲ್ಲಿ ನನ್ನ ಕರ್ತವ್ಯ ಪಾಲನೆಯು ನನ್ನ ಕೈಗಳನ್ನು ಬಂಧಿಸಿರುವುದೋ ಆ ವಿಷಯಗಳಲ್ಲಿ ನನ್ನನ್ನು ಒತ್ತಡಕ್ಕೆ ಗುರಿಪಡಿಸದಿರಿ. ಕೆಲವೊಮ್ಮೆ ಆರ್ಥಿಕ ವಿಷಯಗಳಲ್ಲಿ ಖಾಝಿಯ ತೀರ್ಪು ಪ್ರಕಾರ ಒಂದು ಪಕ್ಷದವರು ಇನ್ನೊಂದು ಪಕ್ಷದವರಿಗೆ ಹಣ ನೀಡಬೇಕಾಗಿ ಬಂದರೆ ಹಣ ನೀಡಬೇಕಾದವರು ಕಷ್ಟದಲ್ಲಿದ್ದರೆ ಅವರಿಗೆ ಸಮಯಾವಕಾಶ ನೀಡಬೇಕು. ಇದು ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನೀಡಿದ ಆಜ್ಞೆ ಪ್ರಕಾರವಾಗಿದೆ. ಅಹಂಭಾವದಿಂದ ವರ್ತಿಸಿ ಯಾರ ಮೇಲೆಯೂ ದೌರ್ಜನ್ಯ ಮಾಡಬಾರದು ಎಂದು ಅಲ್ಲಾಹನೂ ಅವನ ಸಂದೇಶವಾಹಕರೂ ಹೇಳಿದ್ದಾರೆ.

ಒಟ್ಟಿನಲ್ಲಿ, ಯಾರನ್ನು ಮಸೀಹ್ ಎಂದು ಹೆಸರಿಸಲಾಗಿದೆಯೋ ಅವರನ್ನು ಅನುಸರಿಸುವ ಭಾಗ್ಯ ನಮಗೆ ದೊರೆತುದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞರಾಗಿರಬೇಕಾಗಿದೆ.

ಹಝ್ರತ್ ಈಸಾ ಮಸೀಹರ ವಿಶೇಷ ಗುಣದ ಕಾರಣದಿಂದಲೇ ಮಸೀಹ್ ಮೌಊದ್ ಎಂಬ ಹೆಸರು ಇರಿಸಲಾಗಿದೆ. ಈ ವಿಷಯದಲ್ಲಿ ಅವರೊಳಗೆ ಸಾಮ್ಯತೆ ಇದೆ. ಎಲ್ಲಾ ಪ್ರವಾದಿಗಳು ಮೃದುತ್ವದ ಉಪದೇಶ ನೀಡಿದ್ದರೂ ಹಝ್ರತ್ ಈಸಾ ಮಸೀಹರು ಅದರ ಬಗ್ಗೆ ಹೆಚ್ಚು ಒತ್ತು ನೀಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಹ ಮೃದು ಭಾವನೆಯನ್ನು ಜನರು ಹೊಂದುವಂತೆ ಉಪದೇಶಿಸಲು ಅಲ್ಲಾಹನು ಹೇಳಿದನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕ್ರೈಸ್ತರಿಗೆ ಮಾರ್ಗದರ್ಶನ ನೀಡಲು ಸಹ ಮಸೀಹರಾಗಿ ಆಗಮಿಸಿದರು. ಅವರು ಹೀಗೆ ಹೇಳುತ್ತಾರೆ: "ನಿಮ್ಮಲ್ಲಿ ಪೂರ್ಣ ಕ್ರಾಂತಿ ಉಂಟಾಗಲು ಅಲ್ಲಾಹನು ಇಷ್ಟಪಡುತ್ತಾನೆ. ಅದು ನಿಮ್ಮಿಂದ ಒಂದು ಮೃತ್ಯುವನ್ನು ಬಯಸುತ್ತದೆ. ಅನಂತರ ನಿಮ್ಮನ್ನು ಅಲ್ಲಾಹನು ಜೀವಂತಗೊಳಿಸುವನು. ನೀವು ಪರಸ್ಪರ ಬೇಗನೆ ಸೌಹಾರ್ದ ಸ್ಥಾಪಿಸಿರಿ. ನೀವು ನಿಮ್ಮ ಸಹೋದರರನ್ನು ಕ್ಷಮಿಸಿರಿ. ತನ್ನ ಸಹೋದರನೊಂದಿಗೆ ರಾಜಿಯಾಗಲು ಬಯಸದವನು ಕೆಟ್ಟವನಾಗಿದ್ದಾನೆ. ಅವನು ತುಂಡರಿಸಲ್ಪಡುವನು. ಏಕೆಂದರೆ ಅವನು ಒಡಕನ್ನುಂಟುಮಾಡುತ್ತಾನೆ. ನೀವು ನಿಮ್ಮ ಸ್ವಾರ್ಥವನ್ನು ಬಿಟ್ಟು ಬಿಡಿರಿ. ಪರಸ್ಪರ ದ್ವೇಷವನ್ನು ಹೋಗಲಾಡಿಸಿರಿ. ಸತ್ಯವಂತರಾಗಿ ಸುಳ್ಳು ಹೇಳುವವರ ಹಾಗೆ ತಗ್ಗಿ ನಡೆಯಿರಿ. ಹಾಗೆ ಮಾಡಿದರೆ ನೀವು ಕ್ಷಮಿಸಲ್ಪಡುವಿರಿ. ನೀವು ಸ್ವಾರ್ಥ ಎಂಬ ಬೊಜ್ಜಿನಿಂದ ರಕ್ಷಣೆ ಪಡೆಯಿರಿ. ಯಾಕೆಂದರೆ, ಯಾವ ಬಾಗಿಲಿನಿಂದ ನೀವು ಕರೆಯಲ್ಪಟ್ಟಿರುವಿರೋ ಅದರ ಮೂಲಕ ಬೊಜ್ಜು ಹೊಂದಿದವನು ಪ್ರವೇಶಿಸಲಾರ."

ಆದುದರಿಂದ ನಾವು ನಮ್ಮನ್ನು ಬಹಳ ಸುಧಾರಣೆ ಮಾಡಬೇಕು. ನಾವು ನಮ್ಮ ಭಾವೋದ್ವೇಗಗಳನ್ನು ಹತೋಟಿಗೆ ತಂದಿದ್ದೇವೆ ಎಂದು ಲೋಕವು ನಮ್ಮನ್ನು ಮಾದರಿಯಾಗಿ ಕಾಣಬೇಕು.

ಕೆಟ್ಟ ಕೆಲಸಗಳ ನಿವಾರಣೆಗಾಗಿ ಉಪದೇಶ ನೀಡುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಹೇಳಿದ್ದಾರೆ: "ಕೆಟ್ಟ ಕೆಲಸವನ್ನು ಕಂಡರೆ ನಿಮಗೆ ಶಕ್ತಿ ಇದ್ದರೆ ಅದನ್ನು ಕೈಗಳಿಂದ ತಡೆಯಿರಿ. ಅದು ಸಾಧ್ಯವಿಲ್ಲವಾದರೆ ನಾಲಗೆಯಿಂದ ತಡೆಯಿರಿ. ಅದು ಸಹ ಸಾಧ್ಯವಿಲ್ಲವಾದರೆ ನೀವು ಮನಸ್ಸಿನಲ್ಲಿ ಅದರ ಬಗ್ಗೆ ಜಿಗುಪ್ಸೆ ಪಡಿರಿ."

ಅಹ್ಮದಿಯಾ ಸಮಾಜದಲ್ಲೂ ಕೆಟ್ಟಕೆಲಸಗಳನ್ನು ತಡೆಗಟ್ಟುವ ಭಾವನೆ ಉಂಟಾಗಬೇಕು. ಅಥವಾ ನಾವು ಅದನ್ನು ಕೆಟ್ಟದೆಂದು ಭಾವಿಸುವವರಾಗಬೇಕು. ಅದನ್ನು ತಡೆಗಟ್ಟಲು ಶ್ರಮಿಸಬೇಕು. ಎಲ್ಲರೂ ಇಂತಹ ಭಾವನೆ ಹೊಂದಿದರೆ ಯಾರೂ ಸಹ ಕೆಟ್ಟ ಸ್ವಭಾವ ಹೊಂದಲಾರರು. ಯಾವ ದುಷ್ಟನನ್ನೂ ನಾವು ಬೆಂಬಲಿಸುವವರಾಗಬಾರದು. ಆಗ ಪ್ರತಿಯೊಬ್ಬ ತನ್ನ ಸ್ವಭಾವ ಗುಣದ ಮಟ್ಟವನ್ನು

ಉನ್ನತಗೊಳಿಸಲು ಪ್ರಯತ್ನಿಸುವನು. ಅಲ್ಲಾಹನೂ ಅವನ ಸಂದೇಶವಾಹಕರೂ ಆಜ್ಞಾಪಿಸಿದ ಪ್ರಕಾರ ನಾವು ವರ್ತಿಸಬೇಕು. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಒತ್ತಿ ಹೇಳಿದ್ದಾರೆ. ನಾವು ಕ್ಷಮಿಸುವವರಾಗಬೇಕು. ಪ್ರೀತಿಯನ್ನು ಹರಡುವವರಾಗಬೇಕು. ಯಾರಾದರೂ ದೌರ್ಜನ್ಯ ಮಾಡಿದರೆ ಅವನು ದೌರ್ಜನ್ಯ ನಮ್ಮ ಮೇಲೆ ಮಾಡಿದಂತೆ ಮಾತ್ರವಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲೆ ಮಾಡಿದಂತೆ ಆಗುತ್ತದೆ. ಯಾಕೆಂದರೆ ಯಾವ ಕೆಲಸಕ್ಕೋಸ್ಕರ ಅವರು ಆಗಮಿಸಿದರೋ ಅದನ್ನು ಅವನು ತಾತ್ಸಾರ ಮಾಡಿದ್ದಾನೆ. ಇಂತಹ ದೌರ್ಜನ್ಯಗಾರರನ್ನು ತಡೆಯಬೇಕಾದುದು ನಮ್ಮ ಕರ್ತವ್ಯವಾಗಿದೆ. ಕೈಯಿಂದ ಸಾಧ್ಯವಿಲ್ಲವಾದರೆ ನಾಲಗೆಯಿಂದ ಅಥವಾ ಮನಸ್ಸಿನಿಂದಲಾದರೂ ಅದನ್ನು ತಡೆಯಬೇಕು. ಅವನ ಬಗ್ಗೆ ದುಆ ಸಹ ಮಾಡಬೇಕು. ನಾವು ಇಂತ ಕೆಲಸಗಳ ಬಗ್ಗೆ ಅತೃಪ್ತಿ ಸೂಚಿಸಿದರೆ ನಮ್ಮ ಸಮಾಜದಿಂದ ಈ ಕೆಟ್ಟಕೆಲಸಗಳು ದೂರ ಸರಿಯುವುವು. ಆದರೆ ಈಗ ಕಂಡುಬರುವುದೇನೆಂದರೆ ಕೆಲವು ಸಲ ದೌರ್ಜನ್ಯ ಮಾಡುವುದರಲ್ಲಿ ತಂದೆ ತಾಯಂದಿರೂ ಸಹೋದರ ಸಹೋದರಿಯರೂ ಸೇರುತ್ತಾರೆ. ಸ್ನೇಹದ ಹೆಸರಲ್ಲಿ ಬೇರೆಯವರೂ ಅದರಲ್ಲಿ ಸೇರುತ್ತಾರೆ. ನಾವು ಇಂತಹ ದೌರ್ಜನ್ಯವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲಿನ ದೌರ್ಜನ್ಯ ಎಂದು ಭಾವಿಸಬೇಕಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಈಡೇರಿಸುವವರಾಗಬೇಕು.

ನಾವು ಆರಾಧನೆಯ ಜೊತೆಗೆ ಉತ್ತಮ ಸ್ವಭಾವ ಗುಣಗಳನ್ನೂ ಹೊಂದುವವರಾಗುವ ಭಾಗ್ಯ ಲಭಿಸಲಿ. ನಾವು ಪರಸ್ಪರ ಕಲಹಿಸಿಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಕೀರ್ತಿಗೆ ಗುರಿಪಡಿಸುವವರಾಗದಿರೋಣ. ಅಲ್ಲಾಹನು ನಮ್ಮನ್ನು ಎಲ್ಲಾ ವಿಧ ಸ್ವಾರ್ಥಗಳಿಂದ ರಕ್ಷಿಸಲಿ- ಆಮೀನ್.

ಒಂದು ಜನಾಝ ಹಾಝಿರ್ ಇದೆ. ಮುಹಮ್ಮದ್ ಅಬ್ದುರ್ರಹ್ಮಾನ್ ಸಾಹೇಬರ ಪತ್ನಿ ಆಸಿಯ ಬೇಗಮ್ ಸಾಹಿಬ. 3–10–2014ರಂದು ನಿಧನ ಹೊಂದಿದರು. ಅವರಿಗೆ 69 ವರ್ಷ ಪ್ರಾಯವಾಗಿತ್ತು. إِنَّا لِلّٰهِ وَإِنَّا إِلَيْهِ رَاجِعُونَ ಅಲ್ಲಾಹನು ಅವರಿಗೆ ಮಗ್‌ಫಿರತ್ ನೀಡಲಿ- ಆಮೀನ್.

---------------*****-------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 10-10-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*